ಓಎಸ್: 198/2013

**PW**:2

ದಿನಾಂಕ : 25.10.2017ರಂದು ಸಾಕ್ಷಿಯನ್ನು ಪ್ರಮಾಣಮಾಡಿಸಲಾಯಿತು.

**ಪಾಟೀ ಸವಾಲು ಪ್ರತಿವಾದಿಗಳ ಪರ ಶ್ರೀ ಕೆ ಪಿ ವಕೀಲರಿಂದ :**

ವಾದಿಯ ತಂದೆ ಈರಪ್ಪ ಎಂಬುವವರು ಯಾವ ತಾರೀಖು ತೀರಿಕೊಂಡಿರುತ್ತಾರೆ ನನಗೆ ಗೊತ್ತಿಲ್ಲ. ಸದರಿ ಈರಪ್ಪನಿಗೆ ಅಣ್ಣನಾದ ನಾರೆಪ್ಪ, ತಮ್ಮ ವಂಕಟಸ್ವಾಮಿ ಇದ್ದರು. ಸದರಿ ಈರಪ್ಪ ಮತ್ತು ಸಹೋದರರು ತಮ್ಮ ಕುಟುಂಬದ ಆಸ್ತಿಗಳಲ್ಲಿ ವಿಭಾಗವನ್ನು ಮಾಡಿಕೊಂಡ ಕಾಲದಲ್ಲಿ ನಾನು ಹಾಜರಿದ್ದೆನು. ನನಗೆ ಆ ವಿಭಾಗದ ಇಸವಿ, ದಿನಾಂಕ ಗೊತ್ತಿಲ್ಲ. ನನಗೆ ಈಗ 39 ವರ್ಷ ವಯಸ್ಸಾಗಿರುತ್ತದೆ. ಮೇಲೆ ಹೇಳಿದ ಈರಪ್ಪ ಮತ್ತು ಸಹೋದರರು ಯಾವಾಗ ವಿಭಾಗ ಮಾಡಿಕೊಂಡಿರುತ್ತಾರೆ ಮತ್ತು ಆಗ ನನ್ನ ವಯಸ್ಸು ಎಷ್ಟು ಎಂದು ನನಗೆ ಗೊತ್ತಿಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಬಿ

ಶೆಡ್ಯೂಲ್ ಸೊತ್ತುಗಳು ಈರಪ್ಪ ರವರ ಭಾಗಕ್ಕೆ ಹೋಗಿರುತ್ತದೆ ಎಂದು ಹೇಳಿ ಬರೆಸಿರುವುದಿಲ್ಲ. ವಾದಿಯು ಮದುವೆಯಾಗಿ ಸುಮಾರು 25 ವರ್ಷ ಮೇಲ್ಪಟ್ಟು ಆಗಿರುತ್ತದೆ. ವಾದಿಯು ಮದುವೆಯಾದ ನಂತರ ಆಕೆಯ ಗಂಡನ ಮನೆಯಲ್ಲಿ ಸಂಸಾರ ಮಾಡಿಕೊಂಡು ವಾಸವಾಗಿರುತ್ತಾಳೆ ಎಂದರೆ ಸರಿ.

ವಾದಿಯ ತಂದೆ ಈರಪ್ಪ ಮತ್ತು ಆತನ ಸಹೋದರರ ನಡುವೆ ಆಸ್ತಿಗಳಲ್ಲಿ ವಿಭಾಗವು ದಿನಾಂಕ 22.08.1974 ರಲ್ಲಿ ಆಗಿರುತ್ತದೆ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸದರಿ ವಿಭಾಗದಂತೆ ಎ ಶೆಡ್ಯೂಲ್ ಸೊತ್ತುಗಳು ಅಣ್ಣನಾದ ನಾರೆಪ್ಪ, ಬಿ ಶೆಡ್ಯೂಲ್ ಸೊತ್ತುಗಳು ವಾದಿಯ ತಂದೆ ಈರಪ್ಪ ಹಾಗೂ ಸಿ ಶೆಡ್ಯೂಲ್ ಸೊತ್ತುಗಳು ತಮ್ಮನಾದ ವೆಂಕಟಸ್ವಾಮಿ ರವರುಗಳಿಗೆ ಸೇರಿದ್ದಾಗಿದ್ದವು ಎಂದರೆ ನನಗೆ ಗೊತ್ತಿಲ್ಲ. ಆ ರೀತಿ ವಿಭಾಗ ಮಾಡಿಕೊಂಡ ಪ್ರಯುಕ್ತ ಪ್ರತ್ಯೇಕವಾಗಿ ಅವರುಗಳ ಸೊತ್ತುಗಳಿಗೆ ಅವರು ಸ್ವಾಧೀನ ಅನುಭೋಗ ಹೊಂದಿದ್ದರು ಎಂದರೆ ಸರಿಯಲ್ಲ. ಈರಪ್ಪ ನವರ ಹೆಸರಿನಲ್ಲಿ ಬಂದಂತಹ ಬಿ ಶೆಡ್ಯೂಲ್ ಸೊತ್ತುಗಳನ್ನು ಯಾರು ಯಾರಿಗೆ ಮಾರಾಟ ಮಾಡಿರುತ್ತಾರೆ ಎಂಬುದು ನನಗೆ ಗೊತ್ತಿಲ್ಲ. ಈರಪ್ಪನ ತಂದೆ ಹೆಸರು ಆಂಜಲಪ್ಪರವರ ಚೌಡಪ್ಪ ಎಂದರೆ ಸರಿ. ವಾದಿಯ ಮದುವೆಯ ನಂತರ ಆಕೆಯ ತಂದೆ ಈರಪ್ಪ ಆರ್.ತಿಮ್ಮಸಂದ್ರ ಗ್ರಾಮದಲ್ಲಿ ವಾಸವಾಗಿದ್ದರು ಎಂದರೆ ಸರಿ.

ಈರಪ್ಪರವರು ಅವರ ಭಾಗದ ಸೊತ್ತಿನ ಸರ್ವೆ ನಂ 36/5 ರಲ್ಲಿ ಇಪ್ಪತ್ತೊಂದೂವರೆ ಗುಂಟೆ ಜಮೀನನ್ನು ಸರ್ವೆ ನಂ 36/4 ರಲ್ಲಿ 38 ಗುಂಟೆ ಜಮೀನನ್ನು ದಿನಾಂಕ 05.09.1981 ರಲ್ಲಿ ಅವರ ಅಣ್ಣನಾದ ನಾರೆಪ್ಪರವರಿಗೆ ಕ್ರಯದ ಮೂಲಕ ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಅದೇ ರೀತಿ ಈರಪ್ಪ ರವರು ತಮ್ಮ ಸೊತ್ತು ಸರ್ವೆ ನಂ 88/2 ರಲ್ಲಿ 1 ಎಕರೆ 3 ಗುಂಟೆ ಜಮೀನನ್ನು ಅವರ ತಮ್ಮನಾದ ಟಿ.ಸಿ.ವೆಂಕಟಸ್ವಾಮಿಗೆ ದಿನಾಂಕ 06.05.1986 ರಲ್ಲಿ ಕ್ರಯದ ಮೂಲಕ ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಅದೇ ರೀತಿ ಸದರಿ ಈರಪ್ಪ ರವರು ತಮ್ಮ ಸೊತ್ತಾದ ಸರ್ವೆ ನಂ 140/2 ರಲ್ಲಿ 1 ಎಕರೆ 30 ಗುಂಟೆ ಜಮೀನನ್ನು ಮತ್ತು ಸರ್ವೆ ನಂ 108/4 ರಲ್ಲಿ 1 ಎಕರೆ ಜಮೀನನ್ನು ದಿನಾಂಕ 08.06.1996 ರಲ್ಲಿ ಅಣ್ಣನಾದ ನಾರೆಪ್ಪನಿಗೆ ಕ್ರಯದ ಮೂಲಕ ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನಾನು ಮುಖ್ಯ ವಿಚಾರಣೆಯಲ್ಲಿ ಹೇಳಿರುವಂತೆ ಈರಪ್ಪನಿಗೆ ವಿಭಾಗದಲ್ಲಿ ಬಂದಿರುವಂತಹ ಸೊತ್ತುಗಳಿಗೆ ಖಾತೆ ಮತ್ತು ಪಹಣಿಗಳನ್ನು ನೋಡಿರುವುದಿಲ್ಲ.

ಈ ದಾವೆಯ ಬಿ ಶೆಡ್ಯೂಲ್ ಸೊತ್ತು ಮೊದಲಿಗೆ ತೋಟ ಮುನಿಯಪ್ಪನಿಗೆ ಸೇರಿದ್ದಾಗಿತ್ತು ಎಂದರೆ ಸರಿಯಲ್ಲ. ಸದರಿ ತೋಟ ಮುನಿಯಪ್ಪನಿಗೆ ಚಿಕ್ಕಮುನಿಯಪ್ಪ ಮತ್ತು ಮುನಿಯಪ್ಪ ಎಂಬ ಇಬ್ಬರು ಮಕ್ಕಳು ಇರುತ್ತಾರೆ ಎಂದರೆ ಸರಿ. ಸದರಿ ತೋಟ ಮುನಿಯಪ್ಪನ ಮಕ್ಕಳು ದಿನಾಂಕ 09.07.1971 ರಲ್ಲಿ ಈ ದಾವೆಯ ಬಿ ಶೆಡ್ಯೂಲ್ ಸೊತ್ತುಗಳನ್ನು

ಟಿ.ಸಿ.ವೆಂಕಟಸ್ವಾಮಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಈ ದಾವೆಯ ಬಿ ಶೆಡ್ಯೂಲ್ ಸೊತ್ತಿನಲ್ಲಿ ಈಗ ನಾರೆಪ್ಪನ ಮಕ್ಕಳು ಸ್ವಾಧೀನ ಅನುಭೋಗವನ್ನು ಹೊಂದಿರುತ್ತಾರೆ ಎಂದರೆ ಸಾಕ್ಷಿಯು ಈರಪ್ಪನ ಮತ್ತು ನಾರೆಪ್ಪನ ಮಕ್ಕಳು ಇಬ್ಬರು ಇರುತ್ತಾರೆ ಎಂದು ನುಡಿಯುತ್ತಾರೆ. ಈಗ ಆ ಬಿ ಶೆಡ್ಯೂಲ್ ಸೊತ್ತಿನಲ್ಲಿ ನಾರೆಪ್ಪನ ಮಕ್ಕಳು ಇರುತ್ತಾರೆ ಎಂದು ನುಡಿಯುತ್ತಾರೆ. ದಾವೆಯ ಬಿ ಶೆಡ್ಯೂಲ್ ಸೊತ್ತಿಗೆ ಸಂಬಂಧಿಸಿದಂತೆ ಈರಪ್ಪ ಮತ್ತು ಆತನ ಮಕ್ಕಳಿಗೆ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ. ಈರಪ್ಪ ಮತ್ತು ಆತನ ಸಹೋದರರ ನಡುವೆ ಈಗಾಗಲೇ ಭಾಗವಾಗಿರುವ ಕಾರಣ ಅವರ ವಿಭಾಗದ ಪ್ರತ್ಯೇಕ ಸೊತ್ತುಗಳಿಗೆ ಪರಸ್ಪರ ಸಂಬಂಧವಿರುವುದಿಲ್ಲ ಎಂದರೆ ಸರಿಯಲ್ಲ. ಈರಪ್ಪನಿಗೆ ತನ್ನ ಕುಟುಂಬದಲ್ಲಿ ಆದ ವಿಭಾಗದಿಂದ ಬಂದಂತಹ ಸೊತ್ತುಗಳನ್ನು ಈಗಾಗಲೇ ಮಾರಾಟ ಮಾಡಿಕೊಂಡಿರುತ್ತಾನೆ ಎಂದರೆ ಸರಿಯಲ್ಲ. ನಾನು ವಾದಿಯ ಮಾತು ಕೇಳಿಕೊಂಡು ವಾದಿ ಮತ್ತು ಪ್ರತಿವಾದಿಗಳು ಈಗಲೂ ಒಟ್ಟು ಕುಟುಂಬದಲ್ಲಿ ಇದ್ದಾರೆ ಎಂದು ಸುಳ್ಳು ಪ್ರಮಾಣ ಪತ್ರವನ್ನು ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ :

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಲಾಯಿತು.

ಓದಿ ಹೇಳಿ ಕೇಳಿ ಸರಿಯಾಗಿದೆ.

(ಮೊಹಮ್ಮದ್ ರೋಷನ್ ಷಾ)
ಅಪರ ಸಿವಿಲ್ ನ್ಯಾಯಾಧೀಶರು ಮತ್ತು
ಜೆಎಂಎಫ್‌ಸಿ, ಶ್ರೀನಿವಾಸಪುರ